**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 31-15**

(ಪ್ರಾ.ಸಾ. 13 ಚಾ.ಸಾ.-15 )

ತಾಃ 28-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ರವಿ ಎಸ್

ತಂದೆಯ ಹೆಸರು : ಸಂಜೀವಪ್ಪ
ವಯಸ್ಸು : 38 ವರ್ಷ
ಉದ್ಯೋಗ : ಪೋಲೀಸ್ ಇನ್ಸ್‌ಪೆಕ್ಟರ್, ಯಲಹಂಕ ಟ್ರಾಫಿಕ್ ಪೋಲೀಸ್ ಠಾಣೆ
ವಾಸ ಸ್ಥಳ : ಯಲಹಂಕ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಜೂನ್ 2013 ರಿಂದ ಜೂನ್ 2014 ರವರೆಗೆ ದಾಬಾಸ್‌ಪೇಟೆ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕೆಲಸ ಮಾಡಿದ್ದೇನೆ.

ದಿನಾಂಕ 13.02.2014 ರಂದು ಬೆಳಗ್ಗೆ 5-45 ಗಂಟೆಗೆ ನಾನು ಠಾಣಾಧಿಕಾರಿಯಾಗಿದ್ದಾಗಿ ಈ ಕೇಸಿನ ಫಿರ್ಯಾದಿದಾರರಾದ ಪ್ರಾಸಾ 1 ರಘು ಠಾಣೆಗೆ ಹಾಜರಾಗಿ ನಿಪಿ -1 ಲಿಖಿತ ದೂರು ಸಲ್ಲಿಸಿದ್ದನ್ನು ಸ್ವೀಕರಿಸಿ ಅದನ್ನು ಪರಿಶೀಲಿಸಿ ಅದನ್ನು ದಾಬಾಸ್‌ಪೇಟೆ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 35/14 ಕ್ಕೆ ಭಾ.ದಂ.ಸಂ ಕಲಂ 392ರ ಅಡಿ ಪ್ರಕರಣ ದಾಖಲಿಸಿಕೊಂಡು ಎಫ್ ಐ ಆರ್ ತಯಾರಿಸಿ ಮೂಲ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು

ನ್ಯಾಯಾಲಯಕ್ಕೆ ಕಳುಹಿಸಿ ಪ್ರತಿಗಳನ್ನು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಘೋರ ಅಪರಾಧ ವರದಿಯನ್ನು ಸಹ ಮೇಲಧಿಕಾರಿಗಳಿಗೆ ಕಳುಹಿಸಿದೆನು. ನಿಪಿ 1 ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ-1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಮೂಲ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-31 ಎಂದು ಹಾಗೂ ಸಾಕ್ಷಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು.

ಸದರಿ ಪ್ರಕರಣದ ತನಿಖೆಯನ್ನು ಮುಂದುವರೆಸಲು ಚಾಸಾ 16 ನೆಲಮಂಗಲ ವೃತ್ತ ನಿರೀಕ್ಷಕರು ಮೌಖಿಕ ಆದೇಶ ನೀಡಿದ್ದರಿಂದ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪ್ರಾಸಾ-1 ತೋರಿಸಿದ ಕೃತ್ಯ ನಡೆದ ಸ್ಥಳ ಅಂದರೆ ದಾಬಾಸ್‌ಪೇಟೆ ಟೌನ್‌ನ ತುಮಕೂರು ಕಡೆಗೆ ಹೋಗುವ ಬಸ್ ನಿಲ್ದಾಣ ಹತ್ತಿರ ಇರುವ ಸಿದ್ದಗಂಗ ಜುವೆಲರ್ಸ್ ಅಂಗಡಿ ಮುಂಭಾಗ ತೋರಿಸಿ ಸದರಿ ಸ್ಥಳದಲ್ಲಿಯೇ ಆರೋಪಿತರು ತಮ್ಮನ್ನು ತುಮಕೂರಿಗೆ ಹೋಗುತ್ತೇವೆ ಬನ್ನಿ ಎಂದು ಕರೆದು ವಾಹನದಲ್ಲಿ ಹತ್ತಿಸಿಕೊಂಡ ಜಾಗ ಎಂದು ತೋರಿಸಿದ್ದು ಅದರಂತೆ ಪ್ರಾಸಾ 2 ಮತ್ತು ಚಾಸಾ 3 ಪಂಚರ ಸಮಕ್ಷಮ ಬೆಳಗ್ಗೆ 7 ಗಂಟೆಯಿಂದ 8 ಗಂಟೆವರಗೆ ನಿಪಿ-2 ರಲ್ಲಿ ಕಾಣಿಸಿದಂತೆ ಸ್ಥಳ ಮಹಜರ್ ಜರುಗಿಸಿದೆನು. ಈಗ ನನಗೆ ತೋರಿಸುತ್ತಿರುವ ನಿಪಿ-2 ಮಹಜರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ-2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ನಂತರ ಸದರಿ ಪಂಚ ಸಾಕ್ಷೀದಾರರೊಂದಿಗೆ ಹಾಗೂ ಪ್ರಾಸಾ 1 ಫಿರ್ಯಾದಿಯೊಂದಿಗೆ ದಾಬಾಸ್‌ಪೇಟೆ ಹೆಚ್ ಡಿ ಎಫ್ ಸಿ ಬ್ಯಾಂಕಿನ ಎಟಿಎಂ ಕೊಠಡಿಗೆ ಪ್ರಾಸಾ 1 ಕರೆದುಕೊಂಡು ಹೋಗಿದ್ದು, ಇದೇ ಎ ಟಿ ಎಂ ಸೆಂಟರ್‌ನಿಂದ ಆರೋಪಿತರು ತನ್ನಿಂದ ಹಣ ಡ್ರಾ ಮಾಡಿಸಿಕೊಂಡ ಸ್ಥಳ ಅಂತ ತೋರಿಸಿದರು. ಸದರಿ ಹೆಚ್ ಡಿ ಎಫ್ ಸಿ ಬ್ಯಾಂಕಿನ ಎಟಿಎಂ ಮಾರುತಿ ಕಾಂಪ್ಲೆಕ್ಸ್‌ನಲ್ಲಿದ್ದು ಸದರಿ ಎ ಟಿ ಎಂ ಕೊಠಡಿಯಲ್ಲಿ ಪ್ರಾಸಾ 2 ಮತ್ತು ಚಾಸಾ 3 ರರ ಸಮಕ್ಷಮ ನಿಪಿ-3 ರಲ್ಲಿ ಕಾಣಿಸಿದಂತೆ ಮಹಜರ್ ಜರುಗಿಸಿದೆನು. ಈಗ ನನಗೆ ತೋರಿಸುತ್ತಿರುವ ಸದರಿ ನಿಪಿ 3 ಮಹಜರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ 3 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 3(ಸಿ) ಎಂದು ಗುರುತಿಸಲಾಯಿತು. ನಿಪಿ 3 ಮಹಜರ್‌ನ್ನು ಬೆಳಗ್ಗೆ 8-15 ರಿಂದ 8-45 ಗಂಟೆವರೆಗೆ ಮಾಡಿರುತ್ತೇನೆ.

ಅದೇ ದಿನ ಪ್ರಾಸಾ-1 ತನ್ನಿಂದ ಹಾಗೂ ಪ್ರಾಸಾ-2 ವಿನಿಂದ ಆರೋಪಿತರು ಎ ಟಿ ಎಂ ಕಾರ್ಡ್‌ಗಳು, ಹಣ ಮತ್ತು ವಾಚ್‌ನ್ನು ಕಿತ್ತುಕೊಂಡು ಹೋದ ಜಾಗ ಎಂದು ತುಮಕೂರು ತಾಲ್ಲೂಕು , ಹೂಡುಗೆರೆ ಹೋಬಳಿ , ಪಂಡಿತನಹಳ್ಳಿ ಬಾರೆ ಬಳಿ ಕರೆದುಕೊಂಡು ಹೋಗಿ ಬೊಮ್ಮನಹಳ್ಳಿ ರಸ್ತೆ ದೊಂಬರ ಕಾಲೋನಿ ಹತ್ತಿರ ಇರುವ ಸ್ಥಳ ತೋರಿಸಿದರು. ಸದರಿ ಸ್ಥಳವನ್ನು ಪ್ರಾಸಾ 2 ಮತ್ತು ಚಾಸಾ 3 ರವರ ಸಮಕ್ಷಮ ನಿಪಿ 4 ರಲ್ಲಿ ಕಾಣಿಸಿದಂತೆ ಮಹಜರ್ ಬೆಳಗ್ಗೆ 10 ರಿಂದ 11 ಗಂಟೆವರೆಗೆ ಜರುಗಿಸಿದೆನು. ಈಗ ನನಗೆ ತೋರಿಸುತ್ತಿರುವ ಸದರಿ ನಿಪಿ 4

ಮಹಜರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ 4 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 4(ಸಿ) ಎಂದು ಗುರುತಿಸಲಾಯಿತು.

ಪ್ರಕರಣದ ಕಡತವನ್ನು ಅದೇ ದಿನ ಚಾಸಾ 16 ನೆಲಮಂಗಲ ವೃತ್ತ ನಿರೀಕ್ಷಕರಿಗೆ ಮುಂದಿನ ತನಿಖೆಗಾಗಿ ಮತ್ತು ಕ್ರಮಕ್ಕಾಗಿ ವಹಿಸಿಕೊಟ್ಟೆನು.

**ಪಾಟೀ ಸವಾಲುಃ 1, 4, 5 ಆರೋಪಿತರ ಪರ ಶ್ರೀ ಜಿ ಬಿ ಎಸ್ ವಕೀಲರಿಂದ ಃ**

ನಾನು ಅಂದು ಕರ್ತವ್ಯದಲ್ಲಿದ್ದೆನು ಎಂದು ತೋರಿಸಿಲು ಠಾಣಾ ದಿನಚರಿಯ ಪ್ರತಿ ಡಿ ವೈ ಎಸ್ ಪಿ ರವರಿಗೆ ಕಳುಹಿಸಿರುತ್ತೇನೆ. ನಾನು ನಿಪಿ-1 ದಾಖಲಿಸಿಕೊಳ್ಳುವಾಗ ಠಾಣೆಯಲ್ಲಿ ಪ್ರತ್ಯಕ್ಷವಾಗಿ ಇದ್ದಿರಲೇ ಇಲ್ಲ ಎಂದರೆ ಸರಿಯಲ್ಲ. ಪಂಚ ಸಾಕ್ಷೀದಾರರಾದ ಪ್ರಾಸಾ 2 ಮತ್ತು ಚಾಸಾ 3 ಇವರುಗಳಿಗೆ ಮಹಜರ್‌ಗೆ ಬರಬೇಕು ಅಂತ ಲಿಖಿತ ನೋಟೀಸು ಕೊಟ್ಟಿರಲಿಲ್ಲ. ಆದರೆ ಮೌಖಿಕವಾಗಿ ನಾನೇ ತಿಳಿಸಿದ್ದೆನು. ಪ್ರಾಸಾ-1 ಮತ್ತು 2 ಇವರುಗಳು ಸ್ನೇಹಿತರಿದ್ದು ಒಂದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವಂತವರಿದ್ದರು ಎಂದರೆ ಸರಿ.

ನಿಪಿ-2 ರಲ್ಲಿ ಕಾಣಿಸಿದ ಮಹಜರ್ ಸ್ಥಳ ಯಾವಾಗಲೂ ಜನ ಸಂದಣಿಯ ಪ್ರದೇಶ ಎಂದರೆ ಸರಿ. ಸಾಕ್ಷಿ ಸ್ವ ಇಚ್ಛೆಯಿಂದ ಬೆಳಗಿನ ಜಾವ ಅಲ್ಲಿ ಜನ ಸಂದಣಿ ಇದ್ದಿರಲಿಲ್ಲ ಎಂದು ಹೇಳುತ್ತಾರೆ. ನಿಪಿ-2 ರಲ್ಲಿ ಕಾಣಿಸಿದ ಮಹಜರ್ ಸ್ಥಳದಲ್ಲಿ ಸಾಕಷ್ಟು ಅಂಗಡಿಗಳು ಇರುತ್ತವೆ. ಸದರಿ ಸ್ಥಳದಲ್ಲಿ ಬಸ್ ಸ್ಟಾಂಡ್ ಸಹ

ಇರುತ್ತದೆ. ಸದರಿ ಸ್ಥಳದಲ್ಲಿ ಪಂಚರನ್ನಾಗಿ ಆಯ್ಕೆ ಮಾಡಿಕೊಳ್ಳಲು ಜನ ಸಿಗಲಿಲ್ಲ. ನಾವು ಸ್ಥಳಕ್ಕೆ ಇಲಾಖೆಯವರು ಕೊಟ್ಟ ಠಾಣಾ ಜೀಪಿನಲ್ಲಿ ಹೋಗಿದ್ದೆವು. ಠಾಣೆಯಿಂದ ಮೊದಲು ಮಹಜರ್ ಮಾಡಿದ ಸ್ಥಳಕ್ಕೆ ಬೆಳಗ್ಗೆ 7 ಗಂಟೆ ಸುಮಾರಿಗೆ ಹೋಗಿದ್ದೆವು. ಠಾಣೆ ಎಷ್ಟು ಗಂಟೆಗೆ ಬಿಟ್ಟಿದ್ದೆವು ಎನ್ನುವುದು ಈಗ ನನಗೆ ಹೇಳಲು ಬರುವುದಿಲ್ಲ. ನಿಪಿ 2 ಮಹಜರ್‌ನಲ್ಲಿ ಠಾಣೆಯಿಂದ ಎಷ್ಟು ಗಂಟೆಗೆ ಹೊರಟೆವು, ಯಾವ ಜೀಪಿನಲ್ಲಿ ಹೊರಟೆವು ಮತ್ತು ಯಾರೊಂದಿಗೆ ಹೊರಟಿದ್ದೆವು ಎಂದು ನಮೂದಿಸಿಲ್ಲ. ನಿಪಿ 2 ಮಹಜರ್ ಮಾಡಲಾಗಿದೆ ಅಂತ ತೋರಿಸಲು ಅಕ್ಕ ಪಕ್ಕದಲ್ಲಿನ ಜನರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ಅಲ್ಲಿ ಜನ ಯಾರೂ ಇದ್ದಿರಲಿಲ್ಲ ಎಂದು ಹೇಳುತ್ತಾರೆ. ಸದರಿ ಸ್ಥಳ ಬಸ್ ಸ್ಟಾಂಡ್ ಇದ್ದ ಕಾರಣ ಅಲ್ಲಿ ಯಾವಾಗಲೂ ಜನ ಇರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಕಾಣಿಸಿದಂತೆ ವಾಸ್ತವಿಕವಾಗಿ ಹಾಗೂ ಸ್ಥಾನಿಕವಾಗಿ ಪಂಚರ ಸಮಕ್ಷಮ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮಹಜರ್‌ನ್ನು ಬರೆದವರು ಅದಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸರಿ. ನಿಪಿ 2 ನ್ನು ಪ್ರಾಸಾ 1 ವಿನೊಂದಿಗೆ ಶಾಮೀಲಾಗಿ ಈ ಪ್ರಕರಣಕ್ಕೆ ಅನುಕೂಲ ಆಗುವ ಹಾಗೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ 3 ಮಹಜರ್ ಮಾಡಲು ನಿಪಿ 2 ರಲ್ಲಿನ ಮಹಜರ್ ಸ್ಥಳದಿಂದ ಬೆಳಗ್ಗೆ 8 ಗಂಟೆಗೆ ಬಿಟ್ಟಿದ್ದೆವು. ನಿಪಿ 2 ಮಹಜರ್ ಸ್ಥಳದಿಂದ ನಿಪಿ 3 ಮಹಜರ್ ಸ್ಥಳ ಸುಮಾರು 200 ರಿಂದ 250 ಮೀಟರ್ ಅಂತರ ಇದೆ. ನಿಪಿ

2 ಸ್ಥಳದಿಂದ ನಿಪಿ 3 ಮಹಜರ್ ಸ್ಥಳಕ್ಕೆ ಎಲ್ಲರೂ ನಡೆದುಕೊಂಡೇ ಹೋದೆವು. ಸದರಿ ಸ್ಥಳಕ್ಕೆ ನಡೆದುಕೊಂಡು ಹೋಗಲು ಸುಮಾರು 10 ರಿಂದ 15 ನಿಮಿಷ ಬೇಕಾಯಿತು. ನಿಪಿ 3 ರಲ್ಲಿ ಯಾರ್‍ಯಾರು ಕೂಡಿ ಸದರಿ ಸ್ಥಳಕ್ಕೆ ಬಂದೆವು ಅಂತ ನಮೂದಿಸಿಲ್ಲ. ನಿಪಿ 3 ಮಹಜರ್ ಸ್ಥಳದಲ್ಲಿ ಸಾಕಷ್ಟು ಅಂಗಡಿ ಮುಗ್ಗಟ್ಟುಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಎ ಟಿ ಎಂ ಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಇರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಹೆಚ್ ಡಿ ಎಫ್ ಸಿ ಎ ಟಿ ಎಂ ಕೊಠಡಿ ಸೆಕ್ಯೂರಿಟಿ ಗಾರ್ಡ್‌ನನ್ನು ಸಾಕ್ಷೀದಾರನನ್ನಾಗಿ ವಿಚಾರಿಸಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ಸ್ಥಳಕ್ಕೆ ಹೋದಾಗ ಸೆಕ್ಯೂರಿಟಿ ಗಾರ್ಡ್ ಇದ್ದಿರಲಿಲ್ಲ ಅಂತ ಹೇಳುತ್ತಾರೆ. ನಿಪಿ-3 ಮಹಜರ್ ಕಾಲಕ್ಕೆ ಅಕ್ಕ ಪಕ್ಕದಲ್ಲಿ ಜನ ಯಾರೂ ಇದ್ದಿರಲಿಲ್ಲ. ನಿಪಿ 3 ಮಹಜರ್ ಸ್ಥಳ ಬೆಳಗ್ಗೆ 8 ಗಂಟೆ ಕಾಲಕ್ಕೆ ಜನ ಸಂದಣಿಯ ಸ್ಥಳ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-3 ಮಹಜರ್ ಕಾಲಕ್ಕೆ ಜನ ಯಾರೂ ಇದ್ದಿರಲಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ಮಹಜರ್‌ನಲ್ಲಿ ಸದರಿ ಸ್ಥಳದಲ್ಲಿ ಅಕ್ಕ ಪಕ್ಕದಲ್ಲಿ ಯಾರೂ ಜನ ಇದ್ದಿರಲಿಲ್ಲ ಅಂತ ನಮೂದಿಸಿರಲಿಲ್ಲ.

ನಿಪಿ 3 ರಲ್ಲಿ ಕಾಣಿಸಿದಂತೆ ವಾಸ್ತವಿಕವಾಗಿ ಹಾಗೂ ಸ್ಥಾನಿಕವಾಗಿ ಪಂಚರ ಸಮಕ್ಷಮ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ಮಹಜರ್‌ನ್ನು ಬರೆದವರು ಅದಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸರಿ. ನಿಪಿ 3ನ್ನು ಪ್ರಾಸಾ-1 ವಿನೊಂದಿಗೆ ಶಾಮೀಲಾಗಿ ಈ ಪ್ರಕರಣಕ್ಕೆ ಅನುಕೂಲ ಆಗುವ

ಹಾಗೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ಮಹಜರ್‌ಗಳಿಗೆ ಇರುವ ಪಂಚ ಸಾಕ್ಷೀದಾರರು ಒಬ್ಬರೇ ಇರುತ್ತಾರೆ ಎಂದರೆ ಸರಿ. ನಿಪಿ 3 ರಲ್ಲಿ ಸಿ.ಸಿ.ಟಿ.ವಿ ಇದ್ದದ್ದರ ಕುರಿತು ನಮೂದಿಸಿಲ್ಲ. ನಿಪಿ-3 ಮಹಜರ್‌ನ್ನು ಬೆಳಗ್ಗೆ 8-15 ರಿಂದ 8-45 ರವರೆಗೆ ಮಾಡಿರುತ್ತೇನೆ.

ನಿಪಿ 3 ಮಹಜರ್ ಸ್ಥಳದಿಂದ ನಿಪಿ 4 ಮಹಜರ್ ಸ್ಥಳ ಸುಮಾರು 7-8 ಕಿ ಮಿ ಅಂತರ ಇದೆ. ಸದರಿ ನಿಪಿ 4 ಸ್ಥಳಕ್ಕೆ ಪ್ರಾಸಾ 1, ಪಂಚ ಸಾಕ್ಷೀದಾರರು ಹಾಗೂ ನಾವು ಸಿಬ್ಬಂದಿಗಳು ಠಾಣಾ ಜೀಪಿನಲ್ಲಿ ಹೋಗಿದ್ದೆವು. ಇದನ್ನು ನಿಪಿ 4 ರಲ್ಲಿ ನಮೂದಿಸಿಲ್ಲ. ನಿಪಿ 3 ಮಹಜರ್ ನಂತರ ನಾವು ದಾಬಾಸ್‌ಪೇಟೆ ಪೋಲೀಸ್ ಠಾಣೆಗೆ ಬಂದು ನಂತರ ನಿಪಿ 4 ಮಹಜರ್ ಸ್ಥಳಕ್ಕೆ ಹೋಗಿದ್ದೆವು. ನಿಪಿ 3 ಮಹಜರ್ ನಂತರ ಠಾಣೆಗೆ ಎಷ್ಟು ಗಂಟೆಗೆ ಹೋಗಿದ್ದೆವು ಅಂತ ನಿಖರವಾಗಿ ಹೇಳಲು ಬರುವುದಿಲ್ಲ. ನಿಪಿ 4 ಮಹಜರ್ ಸ್ಥಳಕ್ಕೆ ಹೋಗಲು ಠಾಣೆಯಿಂದ ಸುಮಾರು 9.30 ಗಂಟೆಗೆ ಬಿಟ್ಟಿದ್ದೆವು. ನಿಪಿ 4 ರಲ್ಲಿ ನಿಪಿ 3 ಮಹಜರ್ ನಂತರ ಠಾಣೆಗೆ ಹೋಗಿ ನಂತರ ನಿಪಿ 4 ಮಹಜರ್ ಮಾಡಲು ಬಂದೆವು ಅಂತ ನಮೂದಿಸಿಲ್ಲ. ಸಾಕ್ಷಿ ಸ್ವಇಚ್ಛೆಯಿಂದ ಅದರ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ನಿಪಿ 4 ಮಹಜರ್ ಸ್ಥಳ ಜನ ಸಂದಣಿ ಸ್ಥಳ ಎಂದರೆ ಸರಿ. ನಿಪಿ 2 ರ ಪಂಚ ಸಾಕ್ಷೀದಾರರೇ ನಿಪಿ 3 ಮತ್ತು 4 ರ ಮಹಜರ್‌ಗಳಿಗೆ ಪಂಚ ಸಾಕ್ಷೀದಾರರು ಇರುತ್ತಾರೆ ಎಂದರೆ ಸರಿ.

ನಿಪಿ 4 ಮಹಜರ್‌ನ್ನು ಬರೆದವರು ಅದಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸರಿ. ನಿಪಿ 4ನ್ನು ಪ್ರಾಸಾ 1 ವಿನೊಂದಿಗೆ ಶಾಮೀಲಾಗಿ ಈ ಪ್ರಕರಣಕ್ಕೆ ಅನುಕೂಲ ಆಗುವ ಹಾಗೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ 4 ರಲ್ಲಿ ಕಾಣಿಸಿದಂತೆ ವಾಸ್ತವಿಕವಾಗಿ ಹಾಗೂ ಸ್ಥಾನಿಕವಾಗಿ ಪಂಚರ ಸಮಕ್ಷಮ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ 2 ರಿಂದ 4 ಮಹಜರ್‌ಗಳನ್ನು ಠಾಣೆಯಲ್ಲಿಯೇ ಕುಳಿತು ಪ್ರಾಸಾ 1 ವಿನೊಂದಿಗೆ ಶಾಮೀಲಾಗಿ ಈ ಪ್ರಕರಣಕ್ಕೆ ಅನುಕೂಲ ಆಗುವ ಹಾಗೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2ನೇ ಆರೋಪಿ ಪರವಾಗಿ ಶ್ರೀ ವಿ ವಿ ಎಸ್ ವಕೀಲರಿಂದ :**

ಈ ಪ್ರಕರಣದ ದೂರು ದಾಖಲಿಸಿಕೊಳ್ಳುವಾಗ ನಾನು ಠಾಣೆಯಲ್ಲಿಯೇ ಪ್ರತ್ಯಕ್ಷವಾಗಿ ಹಾಜರಿದ್ದೆನು. ಪ್ರಾಸಾ-1 ಸಹ ಠಾಣೆಯಲ್ಲಿಯೇ ಇದ್ದನು. ನಿಪಿ 31 ಕ್ಕೆ ಪ್ರಾಸಾ-1 ವಿನ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ 31 ಕ್ಕೆ ಪ್ರಾಸಾ-1 ವಿಗೆ ದೂರಿನ ಪ್ರತಿ ಪೂರೈಸಲಾಗಿದೆ ಅಂತ ತೋರಿಸಲು ಆತನ ಸಹಿ ಪಡೆದಿಲ್ಲ. ದೂರು ದಾಖಲಿಸಿಕೊಳ್ಳುವಾಗ ನಾನು ಠಾಣೆಯಲ್ಲಿ ಪ್ರತ್ಯಕ್ಷವಾಗಿ ಹಾಜರ್ ಇದ್ದಿರಲೇ ಇಲ್ಲ ಎಂದರೆ ಸರಿಯಲ್ಲ.

ಪೋಲೀಸ್ ಮ್ಯಾನ್ಯುಯೆಲ್ ಪ್ರಕಾರ ಪಂಚನಾಮೆಯ ಶಿರೋನಾಮೆಯಲ್ಲಿ ಪಂಚರ ಹೆಸರು ಮತ್ತು ವಿಳಾಸದ ವಿವರಗಳನ್ನು ನಮೂದಿಸಲೇಬೇಕು ಅಂತ ಇದೆ

ಎಂದರೆ ಸರಿಯಲ್ಲ. ಸಾಕ್ಷಿ ಸ್ವಇಚ್ಛೆಯಿಂದ ದಾಳಿ ಮಾಡುವ ಸಂದರ್ಭದಲ್ಲಿ ಮಾತ್ರ ಪಂಚನಾಮೆಯ ಶಿರೋನಾಮೆಯಲ್ಲಿ ಪಂಚರ ಹೆಸರು ಮತ್ತು ವಿಳಾಸದ ವಿವರಗಳನ್ನು ನಮೂದಿಸಬೇಕು ಅಂತ ಇರುತ್ತದೆ ಎಂದು ಹೇಳುತ್ತಾರೆ. ನಾನು ಈ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 1 , ನಿಪಿ 31 ಹಾಗೂ ನಿಪಿ 2 ರಿಂದ 4 ಇವೆಲ್ಲವುಗಳನ್ನು ನಮ್ಮ ಠಾಣಾ ಸಿಬ್ಬಂದಿ ಈ ಪ್ರಕರಣಕ್ಕೆ ಅನುಕೂಲ ಆಗುವ ಹಾಗೆ ಠಾಣೆಯಲ್ಲಿಯೇ ಕುಳಿತು ಸೃಷ್ಟಿಸಿದವುಗಳಿಗೆ ನಾನು ತದ ನಂತರ ಠಾಣೆಯಲ್ಲಿಯೇ ಕುಳಿತು ಅವುಗಳಿಗೆ ಸಹಿ ಮಾತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇದೇ ಕಾರಣಕ್ಕಾಗಿ ನಿಪಿ 3 ರಲ್ಲಿ ಉಲ್ಲೇಖ ಮಾಡಿರುವ ಮಹಜರ್ ಮಾಡಿದ ಸಮಯ ಬೇರೆ ಇದ್ದು ನಾನು ಸಾಕ್ಷ್ಯ ಹೇಳುವಾಗ ನೀಡಿದ ಸಮಯ ಬೇರೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವಇಚ್ಛೆಯಿಂದ ನಿಪಿ 3 ರಲ್ಲಿ ಮಹಜರ್ ಮಾಡಿದ ಸಮಯ ಕಣ್ತಪ್ಪಿನಿಂದ ತಪ್ಪಾಗಿ ನಮೂದಿಸಲಾಗಿದೆ ಅಂತ ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು